# ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

**ಕ್ರಿಮಿನಲ್ ಮೊಕದ್ದಮೆ ನಂಃ 673/2020**

ಆರೋಪಿತನ ಹೆಸರು ಃ ದಿಗಂಬರ ಕೊಪ್ಪಳ

ತಾಯಿಯ ಹೆಸರು ಃ ರಾಮಚಂದ್ರ

ವಯಸ್ಸು ಃ 48 ವರ್ಷ

ಉದ್ಯೋಗ ಃ ಡ್ರೈವರ

ವಾಸಸ್ಥಳ ಃ ಬಾಗಲಕೋಟೆ.

## ಃ ದಂಡ ಪ್ರಕ್ರಿಯಾ ಸಂಹಿತೆಯ ಕಲಂ-251 ರಡಿ ಆರೋಪಣೆ ಃ

***

ದಿಃ 19-08-2020 ರಂದು ಸಂಜೆ 03-30 ಗಂಟೆ ಸುಮಾರಿಗೆ ಅಮೀನಗಡ ಪೊಲೀಸ ಠಾಣಾ ವ್ಯಾಪ್ತಿಯ ಕಮತಗಿಯಿಂದ ಬಾಗಲಕೋಟ ಕಡೆಗೆ ಹೋಗುವ ಎಸ್ ಎಚ್ 20 ರಸ್ತೆಯ ಮೇಲೆ ಭಾರತ ಗ್ಯಾ ಗೋಡಾವನ ಸಮೀಪ ಆರೋಪಿತನಾದ ನೀನು ನಡೆಸುತ್ತಿದ್ದ ಮೋಟಾರ ಸೈಕಲ್ ನಂಃ ಕೆಎ-29/ಕ್ಯೂ-2828 ನೇದ್ದನ್ನು ನಿನ್ನ ಗೆಳೆಯನಾದ ಮಹಾರುದ್ರಪ್ಪ ಬಡಿಗೇರ ಇತನಿಗೆ ಹಿಂದೆ ಕೂಡಿಸಿಕೊಂಡು ಕಮತಗಿಯಿಂದ ಬಾಗಲಕೋಟ ಕಡೆಗೆ ಅತೀವೇಗವಾಗಿ ಮತ್ತು ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಹೋಗಿ ಮೋಟಾರ ಸೈಕಲ್ ಮೇಲಿನ ನಿಯಂತ್ರಣ ತಪ್ಪಿ ಒಮ್ಮಿದೊಮ್ಮೆಲೆ ಬ್ರೆಕ್ ಹಾಕಿದ್ದರಿಂದ ಮೋಟಾರ ಸೈಕಲ್ ಸಮೇತ ಹಿಂದೆ ಕುಳಿತ ಮಹಾರುದ್ರಪ್ಪ ಬಡಿಗೇರ ಇವರು ಕೆಳಗೆ ಬಿದ್ದರಿಂದ ಅವರ ತಲೆಗೆ ಭಾರಿ ಪೆಟ್ಟಾಗಿ ಸ್ಥಳದಲ್ಲಿಯೇ ಮರಣ ಹೊಂದುವಂತೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ-279, 337, 304(ಎ) ರಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆ1 ಃ ಈ ಮೇಲಿನ ಆಪಾದನೆಯನ್ನು ಓದಿ ಹೇಳಲಾಗಿ ನಿಮಗೆ ತಿಳಿಯಿತೇ?

ಉತ್ತರ ಃ ತಿಳಿಯಿತು

ಪ್ರಶ್ನೆ2 ಃ ಸದರ ಗುನ್ನೆಗೆ ತಪ್ಪೊಪ್ಪಿಕೊಳ್ಳುವಿಯೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರ ಃ ವಿಚಾರಣೆಯಾಗಬೇಕು

ಓ ಹೇ ಕೆ ಸರಿ ಇದೆ.

ದಿನಾಂಕಃ 23-05-2022

23/5

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ

D. R. Koppal